**ಒ ಎಸ್ ನಂ. 46/2024**
**ಡಿ ಡಬ್ಲ್ಯೂ: 01**

**ದಿ: 30-01-2026 ರಂದು ಸಾಕ್ಷಿಯನ್ನು ಕರೆಸಿ ಪ್ರತಿಜ್ಞೆ ಮಾಡಿಸಲಾಯಿತು.**

**ಮುಖ್ಯ ವಿಚಾರಣೆ: ಶ್ರೀ ಎಂ ಎಸ್ ಡಿ ವಕೀಲರಿಂದ:**

ನಾನು ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರ ಸಲ್ಲಿಸಿದ್ದು, ಅದರಲ್ಲಿ ಬರೆದ ಎಲ್ಲಾ ಸಂಗತಿಗಳು ಸರಿಯಾಗಿದ್ದು, ಸತ್ಯವಾಗಿರುತ್ತವೆ.

ಪಹಣಿ ಪತ್ರಿಕೆಗಳನ್ನು ನಿಡಿ-1 ಮತ್ತು 2, ಮರಣ ಪ್ರಮಾಣ ಪತ್ರವನ್ನು ನಿಡಿ-3, ಪಹಣಿ ಪತ್ರಿಕೆಗಳನ್ನು ನಿಡಿ-4 ರಿಂದ 7, ಗ್ರಾಮ ನಮೂನೆ ನಂ 7 ರ ಉತಾರಗಳನ್ನು ನಿಡಿ-8 ರಿಂದ 11, ಮ್ಯುಟೇಷನ ರಜಿಸ್ಟರಗಳ್ನು ನಿಡಿ-12 ರಿಂದ 18 ಎಂದು ಗುರುತಿಸಲಾಯಿತು.

**ಪಾಟೀ ಸವಾಲು: ವಾದಿ ಪರ ಶ್ರೀ ಎಸ್ ಆರ್ ಎಚ್ ವಕೀಲರಿಂದ:**

ದಾವಾ ಆಸ್ತಿಗಳನ್ನು ಹೊರತು ಪಡಿಸಿ ನಮ್ಮ ಕುಟುಂಬಕ್ಕೆ ಬೇರೆ ಆಸ್ತಿಗಳು ಇರುವುದಿಲ್ಲ. ದಾವಾ ಆಸ್ತಿಗಳಿಂದ ಬರುವ ಉತ್ಪನ್ನ ನಮ್ಮ ಕುಟುಂಬ ನಿರ್ವಹಣೆಗೆ ಸಾಕಗಾತ್ತಿತ್ತು ಅಂದರೆ ನಿಜ. ನನ್ನ ಪ್ರತಿವಾದ ಪತ್ರಕ್ಕೆ ಯಾರು ಮಾಹಿತಿ ನೀಡಿದ್ದಾರೆ ನೆನಪಿಲ್ಲ. 1 ನೇ ವಾದಿ ತಾಯಿ ಹಾಗೂ 2 ರಿಂದ 4 ನೇ ವಾದಿಯರಿಗೆ ಹಣ ಮತ್ತು ಬಂಗಾರವನ್ನು ನಮ್ಮ ಹಿರಿಯರು ಕೊಟ್ಟಿದ್ದು ನಾನು ಕೊಟ್ಟಿಲ್ಲ. ನಾನು ಹಣ ಹಾಗೂ ಬಂಗಾರ ಕೊಟ್ಟ ಬಗ್ಗೆ ನನ್ನ ಪ್ರತಿವಾದ ಪತ್ರದಲ್ಲಿ ಬರೆಸಿಲ್ಲ. ಎಷ್ಟು ಹಣ ಹಾಗೂ ಬಂಗಾರ ಕೊಟ್ಟಿದ್ದರು ಎಂದು ನಮ್ಮ ತಂದೆಯನ್ನು ನಾನು ಕೇಳಿ ತಿಳಿದುಕೊಂಡಿಲ್ಲ ಆಗ ನಾನು ಚಿಕ್ಕವನಿದ್ದೆ. 1 ನೇ ವಾದಿಯ ತಾಯಿ ಹಾಗೂ 2 ರಿಂದ 4 ನೇ ವಾದಿಯರು ಹಕ್ಕುಬಿಟ್ಟು ಕೊಟ್ಟ ಪತ್ರ ಬಗ್ಗೆ ದಾಖಲೆ ಇರುವುದಿಲ್ಲ.

ಪಾರ್ವತೆವ್ವನ ಮಕ್ಕಳಿಗೆ ಆಸ್ತಿ ಕೊಟ್ಟಿಲ್ಲ. ದಾವಾ ಆಸ್ತಿಗಳಲ್ಲಿ ಹಿಸ್ಸೆ ಆದ ಬಗ್ಗೆ ದಾಖಲೆಗಳು ಇರುವುದಿಲ್ಲ. ದಾವಾ ಆಸ್ತಿಗಳು ಪಿತ್ರಾರ್ಜಿತವಾಗಿ ಬಂದ ಆಸ್ತಿಗಳು ಅಂದರೆ ನಿಜ. ನಾವು ಹಾಜರ ಪಡಿಸಿದ ದಾಖಲೆಗಳಲ್ಲಿ ಹಕ್ಕುಬಿಟ್ಟ ಪತ್ರ ಇರುವುದಿಲ್ಲ ಅಂದರೆ ನಿಜ. ವಾದಿಯರಿಗೆ ಪಾಲು ನೀಡಬೇಕಾಗುತ್ತದೆ ಎಂದು ಸದರಿಯವರು ಹಕ್ಕುಬಿಟ್ಟು ಕೊಟ್ಟಿದ್ದಾರೆಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ವಾದಿಯರಿಗೆ ಯಾವುದೆ ಬಂಗಾರ ಕೊಟ್ಟಿಲ್ಲ ಅಂದರೆ ಸರಿಯಲ್ಲ. ವಾದಿಯರಿಗೆ ದಾವಾ ಆಸ್ತಿಗಳಲ್ಲಿ ಸಮಪಾಲು ಇರುತ್ತದೆ ಅಂದರೆ ಸಾಕ್ಷಿ ನಾವು ಬೇಡ ಎನ್ನುತ್ತೇವೆ ಎನ್ನುತ್ತಾರೆ.

**ಮರು ವಿಚಾರಣೆ:** ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)**

ಓ ಹೇ ಕೆ ಸರಿ ಇದೆ.

ಹಿರಿಯ ದಿವಾಣಿ ನ್ಯಾಯಾಧೀಶರು,
ಕಲಘಟಗಿ.

**ಒ ಎಸ್ ನಂ. 46/2024**
**ಡಿ ಡಬ್ಲ್ಯೂ: 01**